**ಅಸಲು ದಾವಾ ಸಂಖ್ಯೆ -115/2014**
**DW-2**

**ದಿನಾಂಕ 22-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟಿ ಸವಾಲು ಪ್ರತಿ ವಾದಿ ಪರ ವಕೀಲರಿಂದ.**

ನನ್ನ ಮದುವೆಯು 1988 ರಲ್ಲಿ ಆಗಿರುತ್ತದೆ. ನನ್ನ ಗಂಡ ತೀರಿಕೊಂಡ ನಂತರ 2005 ನೇ ಇಸವಿಯಿಂದ ನಾನು ನನ್ನ ತವರು ಮನೆಯಲ್ಲಿ ವಾಸವಾಗಿರುತ್ತೇನೆ. 1988 ರಲ್ಲಿ ಮದುವೆ ಆದನಂತರ ನಾನು ನನ್ನ ಗಂಡನ ಮನೆಯಲ್ಲಿ ಶಾಹಾಬಾದನಲ್ಲಿ ವಾಸವಾಗಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಮದುವೆಯಾದ 3 ವರ್ಷಗಳ ನಂತರ ನಾನು ಜೇವರ್ಗಿಗೆ ಬಂದು ನನ್ನ ತವರು ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಮ್ ಎ ಪದವಿ ಅನ್ನುತಿರ್ಣ ವಾಗಿರುತ್ತೇನೆ. ನಾನು ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿರುತ್ತೇನೆ. ಆದರು ಸಹ ನನಗೆ ಕನ್ನಡ ಮಾತನಾಡಲು ಬರುವುದಿಲ್ಲ. ನನಗೆ ಕನ್ನಡ ಓದಲು ಬರುತ್ತದೆ.

ನನ್ನ ತಂದೆ ಟ್ರಜರಿಯಲ್ಲಿ ಸಬ್ ಟ್ರಜರಿ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನ್ನ ತಾಯಿಯ ಹೆಸರು ಫಾತಿಮಾಬಿ. ನನ್ನ ತಾಯಿ ಯಾವುದೆ ನೌಕರಿ ಅಥವಾ ವ್ಯಾಪಾರ ಮಾಡುತ್ತಿರಲಿಲ್ಲ. ನನ್ನ ತಾಯಿಗೆ ನನ್ನ ತಂದೆ ಮೃತ ಪಟ್ಟ ನಂತರ ಮಾಶಾಸನ ಬರುತ್ತಿತ್ತು. ಎಷ್ಟು ಮಾಶಾಸನ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ನಾನು ನನ್ನ ತಂದೆ ತಾಯಿ ಮತ್ತು ನಮ್ಮ ಕುಟುಂಬಸ್ತರು ಒಟ್ಟಿಗೆ ವಾಸವಾಗಿದ್ದೆವು. ನನ್ನ ತಂದೆಯ ಜೀವಿತ ಕಾಲದಲ್ಲಿ ಯಾವ ಯಾವ ಆಸ್ತಿಗಳನ್ನು ಖರೀದಿ ಮಾಡಿದ್ದಾರೆಂದು ನನಗೆ ಮಾಹಿತಿ ಇಲ್ಲ. ನಮ್ಮ ಕುಟುಂಬದಲ್ಲಿ ಯಾರು ಯಾರು ಯಾವ ಯಾವ ಆಸ್ತಿಗಳನ್ನು ಖರೀದಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ 1991 ರಲ್ಲಿ ಮೃತಪಟ್ಟಿರುತ್ತಾರೆ. ನನಗೆ 8 ನೇ ಪ್ರತಿವಾದಿ ಗೊತ್ತಿಲ್ಲ. ನನಗೂ 8 ನೇ ಪ್ರತಿವಾದಿಗೂ ಯಾವುದೆ ಸಂಬಂಧ ಇಲ್ಲ. ಈ ದಾವೆಯನ್ನು ಯಾರು ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಆಸ್ತಿಗೆ ಸಂಬಂದಿಸಿ ಹೂಡಿರುತ್ತಾರೆ. ಈ ದಾವೆಯನ್ನು ಇಪ್ತಾಕಾರ್ ರವರು ಹೂಡಿರುತ್ತಾರೆ. ಇಪ್ತಾಕಾರರವರಿಗು ಮತ್ತು ನಿಮಗೆ ಏನು ಸಂಬಂದ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ.

ಇಸ್ಲಾಂ ಧರ್ಮದಲ್ಲಿ ಮದುವೆ ಸಮಯದಲ್ಲಿ ವದುವಿನ ತಂದೆ ಏನೆಲ್ಲಾ ಬೆಲೆ ಬಾಳುವ ವಸ್ತುಗಳನ್ನು ನೀಡುತ್ತಾರೊ ಅವುಗಳ ಒಂದು ಪಟ್ಟಿ ತಯಾರು ಮಾಡಲಾಗುತ್ತದೆ ಎಂದರೆ ನಿಜ. ಸದರಿ ಪಟ್ಟಿಗೆ ವದು, ವರ, ಅವರ ತಂದೆ ತಾಯಿಗಳು ಹಾಗೂ ಸಾಕ್ಷಿದಾರರು ಸಹಿ ಮಾಡುತ್ತಾರೆ ಎಂದರೆ ನಿಜ. ಅದೇ ರೀತಿಯಲ್ಲಿ ದಾವರನ್ನು ಯಾವ ರೂಪದಲ್ಲಿ ನೀಡಲಾಯಿತ್ತು ಎಂದು ನಿಖಾ ನಾಮದಲ್ಲಿ ಬರೆಯಲಾಗುತ್ತದೆ ಎಂದರೆ ನಿಜ. ನಿಖಾ ಪತ್ರದ ಒಂದು ಪ್ರತಿ ವರನಿಗೆ, ಒಂದು ಪ್ರತಿ ವದುವಿಗೆ, ಒಂದು ಪ್ರತಿ ಖಾಜಿರವರ ಬಳಿ ಹಾಗೂ ಒಂದು ಪ್ರತಿ ಜಿಲ್ಲಾ ವಕ್ಪ್ ಬೋರ್ಡನಲ್ಲಿ ಮತೊಂದು ಪ್ರತಿ ಬೆಂಗಳೂರು ವಕ್ಪ್ ಬೋರ್ಡನಲ್ಲಿ ಇರುತ್ತದೆ ಎಂದರೆ ನಿಜ. ನನ್ನ ತಾಯಿಯ ನಿಖಾ ಫಾರಂನ್ನು ನ್ಯಾಯಲಯದಲ್ಲಿ ಹಾಜರು ಪಡಿಸಿಲ್ಲ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ. ನಾನು ರೆಜೀಸ್ಟರ್, ಮ್ಯುಟೇಶನ, ಮತ್ತು ನನ್ನ ಆಸ್ತಿಯ

ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ನನ್ನ ಸ್ವಂತ ಆದಾಯದ ಮೂಲ ಇರುವುದಿಲ್ಲ. ಸಾಕ್ಷಿಯು ಮುಂದುವರೆದು  ನನಗೆ ಪ್ರತಿ ತಿಂಗಳು ಬಾಡಿಗೆ ಬರುತ್ತದೆ ಎಂದು ನುಡಿಯುತ್ತಾರೆ. ನನಗೆ ಬಾಡಿಗೆ ಬರುವ ಮನೆ ಕಲಬುರಗಿಯ ರಿಂಗ ರಸ್ತೆಯಲ್ಲಿ ಇರುತ್ತದೆ. ಸದರಿ ಮನೆಯ ದಾಖಲಾತಿಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ಯಾವುದೇ ಬಾಡಿಗೆ ಬರುವುದಿಲ್ಲ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ  ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

**ದಿವಾನಿ ನ್ಯಾಯಾಧೀಶರು**
**ಜೇವರ್ಗಿ**